<u>ಅಸಲು ದಾವಾ ಸಂಖ್ಯೆ: **-115/2023**</u> ಪಿ.ಡಬ್ಲ್ಯೂ**:-1**

ದಿನಾಂಕ: **01-02-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದ :-</u>

ನಾನು **5** ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಸರಿಯಾಗಿ ಬರುವುದಿಲ್ಲ. ನನ್ನ ತಂದೆಯ ಹೆಸರು ಕುಂಟ ಹನುಮಂತಪ್ಪ. ನನ್ನ ತಂದೆಗೆ **6** ಜನ ಮಕ್ಕಳು ಅಂದರೆ ಹನುಮಂತಮ್ಮ, ಶೇಷಗಿರಿಯಪ್ಪ, ಹನುಮಂತಪ್ಪ, ಗಂಗಮ್ಮ, ನಾನು ಸಿದ್ದಪ್ಪ ಮತ್ತು ಲೀಲಾವತಿ. ನಮ್ಮ ತಂದೆಯವರು ಈಗ್ಗೆ ಸುಮಾರು **30** ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ನಮ್ಮ ಅಣ್ಣ ಶೇಷಗಿರಿಯಪ್ಪ ಈಗ್ಗೆ **2** ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ನನ್ನ ಇನ್ನೊಬ್ಬ ಅಣ್ಣ ಹನುಮಂತಪ್ಪ ಈಗ್ಗೆ **7-8** ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ನನ್ನ ಅಣ್ಣ ಹನುಮಂತಪ್ಪನಿಗೆ ಇಬ್ಬರು ಹೆಂಡತಿಯರು ಅಂದರೆ ಸರೋಜಮ್ಮ ಮತ್ತು ಸುನಂದಮ್ಮ. ಈಗ ಸರೋಜಮ್ಮ ಮತ್ತು ಸುನಂದಮ್ಮ ಜೀವಂತವಾಗಿದ್ದಾರೆ. ನನ್ನ ಅಣ್ಣ ಹನುಮಂತಪ್ಪನಿಗೆ ಮೊದಲನೇ ಹೆಂಡತಿ ಸರೋಜಮ್ಮ, ಎರಡನೇ ಹೆಂಡತಿ ಸುನಂದಮ್ಮ. ನಿಪಿ-**1** ವಂಶವೃಕ್ಷದಲ್ಲಿ ನನ್ನ ಅಣ್ಣನ ಹೆಂಡತಿ ಸರೋಜಮ್ಮನ ಹೆಸರು ನಮೂದಾಗಿಲ್ಲ ಎಂದರೆ ಸರಿ. ಸರೋಜಮ್ಮನನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಸರೋಜಮ್ಮರವರಿಗೆ ಮಕ್ಕಳು ಇರುವುದಿಲ್ಲ. ಸರೋಜಮ್ಮನನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶಕೋರಿದ್ದು ನೀಡಿ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.